**1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ನಂಜನಗೂಡು**

**<u>ಸಿ.ಸಿ.ಸಂಖ್ಯೆಃ 888/2020</u>**

**ಪಿರ್ಯಾದಿ :** ಕವಲಂದೆ ಪೊಲೀಸರು

**ವಿರುದ್ಧ**

**ಆರೋಪಿತರು :** ರಾಜೇಂದ್ರ, ಬಿನ್ ಮಹದೇವು, 25 ವರ್ಷ
ವಾಸಃ ಕೊಣನೂರು ಪಾಳ್ಯ ಗ್ರಾಮ, ನಂಜನಗೂಡು ತಾ.

**<u>ದೋಷಾರೋಪಣೆ</u>**

*ಶ್ರೀ ಕಿಶೋರ್ ಕುಮಾರ್ ಎಂ., 1 ನೇ ಹೆಚ್ಚುವರಿ* ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಬಿ.ಎ. ಎಲ್‌ಎಲ್.ಬಿ., ನಂಜನಗೂಡು ಆದ ನಾನು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆ:-

ದಿನಾಂಕ 08.03.2020 ರಂದು ರಾತ್ರಿ 10.30 ಗಂಟೆ ಸಮಯದಲ್ಲಿ ಕವಲಂದೆ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಕೊಣನೂರು ಪಾಳ್ಯ ಗ್ರಾಮದ ಸಾರ್ವಜನಿಕ ರಸ್ತೆಯ ಅರಳಿಮರದ ಬಳಿ ಬೆಂಡರವಾಡಿ ಗ್ರಾಮ ದೇವತೆ ಹಬ್ಬದ ಸಂಬಂಧ ಗ್ರಾಮದಲ್ಲಿ ಮೈಕ್ ನಲ್ಲಿ ಹಾಡು ಹಾಕಿದ್ದಾಗ, ಚಾಸಾ-1 ರವರು ತನ್ನ ಸಂಬಂಧಿಕರನ್ನು ಹಬ್ಬಕ್ಕೆ ಕರೆಯಲು ಹೋಗುತ್ತಿರುವಾಗ ಆರೋಪಿಯು ಮೈಕ್ ನಲ್ಲಿ ಹಾಕಿರುವ ಹಾಡಿಗೆ ಡ್ಯಾನ್ಸ್ ಮಾಡುತ್ತಿರಮ ಸಮಯದಲ್ಲಿ ಚಾಸಾ-1 ರವರನ್ನು ಬಲವಂತವಾಗಿ ಡ್ಯಾನ್ಸ್ ಮಾಡುವಂತೆ ಒತ್ತಾಯಿಸಿದಾಗ ಚಾಸಾ-1 ರವರು ತಾನು ಡ್ಯಾನ್ಸ್ ಮಾಡುವುದಿಲ್ಲ, ಸಂಬಂಧಿಕರನ್ನು ಹಬ್ಬಕ್ಕೆ ಕರೆಯಲು ಹೋಗಬೇಕು ಎಂದು ಹೇಳುತ್ತಿದ್ದರೂ ಆರೋಪಿಯಾದ ನೀವು ಚಾಸಾ-1 ರವರಿಗೆ ಸೂಳೇ ಮಗನೇ, ಬೋಳಿ ಮಗನೇ ನಾನು ಹೇಳಿದರೂ ಡ್ಯಾನ್ಸ್ ಮಾಡುವುದಿಲ್ಲ ಎಂದು ಹೇಳುತ್ತೀಯಾ ಎಂದು ಅವಾಚ್ಯ ಶಬ್ದಗಳಿಂದ ನಿಂದಿಸಿ ಆ ಮೂಲಕ ಅವರಿಗೆ ಉದ್ರೇಕವನ್ನುಂಟು ಮಾಡಿದರೆ ಅಂತಹ ಉದ್ರೇಕದಿಂದ ಶಾಂತಿ ಭಂಗ ಮಾಡಲಿ ಅಥವಾ ಇತರೆ ಯಾವುದೇ ಅಪರಾಧ ಮಾಡಲಿ ಎನ್ನುವ ಉದ್ದೇಶದಿಂದ ಅವರನ್ನು ಅವಮಾನಿಸಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾರತ ದಂಡ ಸಂಹಿತೆಯ ಕಲಂ 504 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಕೊನೆಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿಯಾದ ನೀವು ದೊಣ್ಣೆಯಿಂದ ಚಾಸಾ-1 ರವರ ಎಡಭಾಗದ ಕೈ ಭುಜಕ್ಕೆ ಸ್ವಯಂ ಪ್ರೇರಿತವಾಗಿ ಹೊಡೆದು ತೀವ್ರ ಸ್ವರೂಪದ ನೋವುಂಟುಮಾಡಿದ ಕಾರಣ, ಭಾರತ ದಂಡ ಸಂಹಿತೆಯ ಕಲಂ 326 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಃ ಆಪಾದನೆ ಃ

ಪ್ರಶ್ನೆ1 ಃ ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ಓದಿ ಹೇಳಿದ್ದು ಅರ್ಥವಾಯಿತೇ ?
ಉತ್ತರ ಃ

ಪ್ರಶ್ನೆ2 ಃ ಸದರೀ ಆಪಾದನೆಗಳನ್ನು ಒಪ್ಪಿಕೊಳ್ಳುವೆಯಾ ಅಥವಾ ವಿಚಾರಣೆಯಾಗಬೇಕೋ?
ಉತ್ತರ ಃ

(ಮೇಲ್ಕಂಡ ಆರೋಪವನ್ನು ಆರೋಪಿಗೆ ಓದಿ ಹೇಳಿ ಕೇಳಲಾಯಿತು. ಆರೋಪಿ ಕೊಟ್ಟ ಉತ್ತರವನ್ನು ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನು ಒಳಗೊಂಡಿದೆ ಎಂದು ದಿನಾಂಕ 07.06.2023 ರಂದು ತೆರೆದ ನ್ಯಾಯಾಲಯದಲ್ಲಿ ದೃಢೀಕರಿಸಿರುತ್ತೇನೆ.)

ಸಹಿ/-

**1 ನೇ ಹೆ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.**

**ನಂಜನಗೂಡು**